**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು**

**ಉಪಸ್ಥಿತರು**

ಶ್ರೀ. ರಘುರಾಮ.ಎನ್.ಎಸ್., ಬಿ.ಎ., ಎಲ್ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ನಂಜನಗೂಡು

**ಕ್ರಿಮಿನಲ್ ಮಿಸ್ ಸಂಖ್ಯೆ: 2414/2022**

**ದಿನಾಂಕ: 11 ನೇ ಅಕ್ಟೋಬರ್ 2022**

**ಅರ್ಜಿದಾರರು** :

ಪೂರ್ಣಿಮ ಎ.ಎಸ್ ಕೋಂ ಗುರುಪ್ರಸಾದ್,
ಬಿನ್ ಲೇಟ್ ಶಿವರಾಮಪ್ಪ,
ವಯಸ್ಸು ಸುಮಾರು 30 ವರ್ಷ,
ವಾಸ: ಅಂಬಳೆ ಗ್ರಾಮ, ಕಸಬಾ ಹೋಬಳಿ,
ನಂಜನಗೂಡು ತಾಲ್ಲೂಕು.

(ಪ್ರತಿನಿಧಿಸುವವರು: ಶ್ರೀ. ಎಂ.ಬಿ., ನ್ಯಾಯವಾದಿಗಳು)

**-ವಿರುದ್ಧ-**

**ಎದುರುದಾರರು** :

ಸಿ.ಕೆ. ಗುರುಪ್ರಸಾದ್ ಬಿನ್ ಲೇಟ್ ಕುಮಾರ್,
ವಯಸ್ಸು ಸುಮಾರು 40 ವರ್ಷ,
ವಾಸ: ಮಹದೇಶ್ವರ ಲೇಔಟ್,
ನಂಜನಗೂಡು ಟೌನ್.

(ಪ್ರತಿನಿಧಿಸುವವರು: ಶ್ರೀ. ಕೆ.ವಿ.ಪಿ., ನ್ಯಾಯವಾಧಿಗಳು)

**ದಂಡ ಪ್ರಕ್ರಿಯಾ ಸಂಹಿತೆ ಕಲಂ 125(3)ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:1 ರ ಕುರಿತಾದ ಆದೇಶ:-**

ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 125(3)ರ ಅಡಿಯಲ್ಲಿ ಸಲ್ಲಿಸಿದ್ದು, ಮುಖ್ಯ ಅರ್ಜಿಯ ಅಂತಿಮ ಅಂತಿಮ ಆದೇಶದವರೆಗೂ ಅರ್ಜಿದಾರರಿಗೆ ವೈದ್ಯಕೀಯ ವೆಚ್ಚಕ್ಕಾಗಿ ಮತ್ತು ಇತರೆ ಖರ್ಚಿಗಾಗಿ ಮಾಸಿಕ ರೂ.15,000/- ಮಧ್ಯಂತರ ಜೀವನಾಂಶವನ್ನು ನೀಡಬೇಕೆಂದು ಎದುರುದಾರರಿಗೆ ನಿರ್ದೇಶನ ನೀಡಬೇಕೆಂದು ಕೋರಿರುತ್ತಾರೆ.

**2. ಅರ್ಜಿದಾರರು ಸಲ್ಲಿಸಿರುವ ಅರ್ಜಿಯಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:-**

ಅರ್ಜಿದಾರರು ಮತ್ತು ಎದುರುದಾರರ ವಿವಾಹವು ದಿನಾಂಕ 18.04.2014 ರಂದು ನಂಜನಗೂಡಿನ ಯಾತ್ರಿ ಭವನದಲ್ಲಿ ಗುರುಹಿರಿಯರ ಸಮ್ಮುಖದಲ್ಲಿ ಸಂಪ್ರದಾಯದಂತೆ ನೆರವೇರಿದ್ದು, ಸದರಿ ವಿವಾಹದ ಖರ್ಚು ವೆಚ್ಚಗಳನ್ನು ಅರ್ಜಿದಾರರ ಕುಟುಂಬದವರು ಭರಿಸಿರುತ್ತಾರೆ. ಎದುರುದಾರರಿಗೆ ವರದಕ್ಷಿಣೆಯಾಗಿ ಧನಕನಕಗಳನ್ನು ನೀಡಿದ್ದು, ಅರ್ಜಿದಾರರ ಮತ್ತು ಎದುರುದಾರರ ವಿವಾಹದ ನಂತರ 2 ವರ್ಷದವರೆಗೂ ಅನೋನ್ಯವಾಗಿ ಜೀವನ ನಡೆಸಿಕೊಂಡು ಬಂದಿರುತ್ತಾರೆ. ತದನಂತರದಲ್ಲಿ ಅರ್ಜಿದಾರರಿಗೆ ಅನಾರೋಗ್ಯ ಕಾಣಿಸಿಕೊಂಡಿದ್ದು, ಹಾಗಾಗಿ ಎದುರುದಾರರು ಆಕೆಯನ್ನು ನೋಡಿಕೊಳ್ಳಲು ನಿರ್ಲಕ್ಷಿಸಿ, ಬೇಜವಾಬ್ದಾರಿತನ ತೋರಿಸಿರುತ್ತಾರೆ. ಅರ್ಜಿದಾರರಿಗೆ ಅನಾರೋಗ್ಯದ ನಿಮಿತ್ತವಾಗಿ ಆಕೆಯ ಎರಡು ಕಿಡ್ನಿಗಳು ವೈಫಲ್ಯಗೊಂಡಿದ್ದು, ಆಕೆಗೆ ಚಿಕಿತ್ಸೆಯನ್ನು ಕೊಡಿಸದೆ ತವರು ಮನೆಗೆ ಕಳುಹಿಸಿರುತ್ತಾರೆ. ಅರ್ಜಿದಾರರು ಆಕೆಯ ತಂದೆಯ ಅಕಾಲಿಕ ಮರಣದಿಂದಾಗಿ ಆಕೆಯ ತಾಯಿಯನ್ನೇ ಅವಲಂಬಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಹಾಗಾಗಿ ಅರ್ಜಿದಾರರು ಅನ್ಯ ಮಾರ್ಗವಿಲ್ಲದೆ ಮಾನಸಿಕ ಹಿಂಸೆಯಿಂದ ಬಳಲುತ್ತಾ ಎದುರದಾರರ ಬರುವಿಕೆಯನ್ನು ನಿರೀಕ್ಷಿಸಿ ಜೀವನವನ್ನು ಮುಂದೂಡಿರುತ್ತಾರೆ. ಎದುರುದಾರರು ಫೆಬ್ರವರಿ ತಿಂಗಳಲ್ಲಿ ಅರ್ಜಿದಾರರ ಮನೆಗೆ ಬಂದು ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಅರ್ಜಿದಾರರ ತಂದೆಗೆ ಸೇರಿದ ಜಮೀನನ್ನು ತನ್ನ ಹೆಸರಿಗೆ ಖಾತೆ ಮಾಡಿಕೊಡುವಂತೆ ಹಾಗೂ ಹಣವನ್ನು ತನಗೆ ನೀಡುವಂತೆ ಬೆದರಿಕೆ ಹಾಕಿರುತ್ತಾರೆ. ಎದುರುದಾರರ ಈ ಕೃತ್ಯಕ್ಕೆ ಆತನ ತಮ್ಮನು ಸಹ ಸಹಕರಿಸಿರುತ್ತಾರೆ. ಈ ಕುರಿತಾಗಿ ಎದುರುದಾರರು ಮತ್ತು ಆತನ ಕುಟುಂಬದವರ ವಿರುದ್ಧ ನಂಜನಗೂಡು ಪಟ್ಟಣ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳ ಪ್ರಕರಣವನ್ನು ದಾಖಲಿಸಲಾಗಿರುತ್ತದೆ. ಅರ್ಜಿದಾರರ ತಂದೆ

ನಿರ್ಮಾಣ ಮಾಡಿದಂತಹ ರಾಮಸ್ವಾಮಿ ಬಡಾವಣೆ ಮನೆಯನ್ನು ಮಾರಾಟ ಮಾಡಿಸಿ ಎದುರುದಾರರು ಮತ್ತು ಅವರ ಮನೆಯವರು ಹಣವನ್ನು ಪಡೆದುಕೊಂಡಿರುತ್ತಾರೆ. ಅರ್ಜಿದಾರರು ಆಕೆಯ ಅನಾರೋಗ್ಯದಿಂದ ಕಿಡ್ನಿಯ ವೈಫಲ್ಯದ ಸಮಸ್ಯೆಯಿಂದ ಬಳಲುತಿದ್ದು, ಹಾಗಾಗಿ ಅರ್ಜಿದಾರರಿಗೆ ಡಯಾಲಿಸೀಸ್ ಚಿಕಿತ್ಸೆಯನ್ನು ಪಡೆಯಲು ಆರ್ಥಿಕ ನೆರವಿನ ಅಗತ್ಯತೆ ಇರುತ್ತದೆ. ಹಾಗಾಗಿ ಎದುರುದಾರರು ಚಿಕಿತ್ಸೆಯನ್ನು ಕೊಡಿಸದೆ ಬೇಜವಾಬ್ದರಿತನ ತೋರಿ ನಿರ್ಲಕ್ಷ ಮಾಡಿರುತ್ತಾರೆ. ಅರ್ಜಿದಾರರ ದೈನಂದಿನ ಜೀವನೋಪಾಯಕ್ಕಾಗಿ ಮತ್ತು ಚಿಕಿತ್ಸೆಗಾಗಿ ಮಾಸಿಕ ರೂ.15,000/-ಗಳ ಅಗತ್ಯತೆ ಇರುತ್ತದೆ. ಹಾಗಾಗಿ ನ್ಯಾಯಾಲಯವು ಮುಖ್ಯ ಅರ್ಜಿಯ ಅಂತಿಮ ಆದೇಶದವರೆಗೂ ಅರ್ಜಿದಾರರಿಗೆ ಮಾಸಿಕ ರೂ.15,000/- ಪಾವತಿಸುವಂತೆ ಎದುರುದಾರರಿಗೆ ನಿರ್ದೇಶಿಸಬೇಕೆಂದು ಕೋರಿರುತ್ತಾರೆ. ಪ್ರಸ್ತುತ ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ಅರ್ಜಿದಾರರಿಗೆ ತುಂಬಲಾರದ ನಷ್ಟ ಹಾಗೂ ಆರ್ಥಿಕ ತೊಂದರೆ ಉಂಟಾಗುತ್ತದೆ. ಅದಕ್ಕೆ ಬದಲಾಗಿ ಈ ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ ಎದುರುದಾರರಿಗೆ ಯಾವುದೇ ಹಾನಿ ಉಂಟಾಗುವುದಿಲ್ಲ. ಎದುರುದಾರರು ಆರ್ಥಿಕವಾಗಿ ಸಮರ್ಥರಾಗಿದ್ದು, ಮಾಸಿಕ ರೂ.10,00,000/- ಆದಾಯವನ್ನು ಗಳಿಸುವ ಸಾರ್ಮರ್ಥ್ಯವನ್ನು ಹೊಂದಿರುತ್ತಾರೆ. ಹಾಗಾಗಿ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

3. **ಅರ್ಜಿದಾರರು ಸಲ್ಲಿಸಿರುವ ಮೇಲ್ಕಂಡ ಅರ್ಜಿಗೆ ಎದುರುದಾರರು ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:-**

ಅರ್ಜಿದಾರರು ಸಲ್ಲಿಸಿರುವ ಮುಖ್ಯ ಅರ್ಜಿಯಲ್ಲಿನ ಅಂಶಗಳನ್ನು ಹಾಗೂ ಮದ್ಯಂತರ ಅರ್ಜಿಯಲ್ಲಿನ ಉಲ್ಲೇಖಗಳನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ಅಲ್ಲಗಳೆದಿರುತ್ತಾರೆ. ಅರ್ಜಿದಾರರಿಗೆ ಅನಾರೋಗ್ಯ ಕಾಣಿಸಿಕೊಂಡ ನಂತರದಲ್ಲಿ ಎದುರುದಾರರು ನಿರ್ಲಕ್ಷಿಸಿರುತ್ತಾರೆ ಎಂಬುದನ್ನು ಅಲ್ಲಗಳೆದಿರುತ್ತಾರೆ. ಅರ್ಜಿದಾರರಿಗೆ ಎರಡು ಕಿಡ್ನಿಗಳು ವೈಫಲ್ಯಗೊಂಡಿದೆ ಎಂಬುದನ್ನು ಒಪ್ಪಿರುತ್ತಾರೆ. ಆದಾಗ್ಯೂ ಸದರಿ ಅನಾರೋಗ್ಯಕ್ಕೆ ಎದುರುದಾರರು ಚಿಕಿತ್ಸೆ ಕೊಡಿಸಿರುವುದನ್ನು ಅರ್ಜಿದಾರರು ಮರೆಮಾಚಿರುತ್ತಾರೆ ಎಂದು ಹೇಳಿರುತ್ತಾರೆ. ಅರ್ಜಿದಾರರನ್ನು ನೋಡಿಕೊಳ್ಳಲು ಎದುರುದಾರರ ಮನೆಯಲ್ಲಿ ಯಾರು ಇಲ್ಲವೆಂದು ತಕರಾರು ತೆಗೆದು ಅರ್ಜಿದಾರರು ಆಕೆಯ ತವರು ಮನೆಯಲ್ಲಿ ಇದ್ದಾರೆ. ಹಾಗಾಗಿ ಸದರಿ ಅಂಶವನ್ನು ದುರುಪಯೋಗಪಡಿಸಿಕೊಂಡು ಎದುರುದಾರರ ವಿರುದ್ಧ ಸುಳ್ಳು ಆಪಾದನೆಗಳನ್ನು ಮಾಡಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರಿಗೆ ಸಂಬಂಧಿಸಿದಂತಹ ಮನೆಯನ್ನು ಮಾರಾಟ ಮಾಡಿಸಿ ಹಣವನ್ನು ಪಡೆಯುವಂತಹ ಅಗತ್ಯತೆ ಎದರುದಾರರಿಗೆ

ಇರುವುದಿಲ್ಲ. ಹಾಗಾಗಿ ಎದುರುದಾರರ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತಾರೆ. ಅರ್ಜಿದಾರರು ನಂಜನಗೂಡಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದು, ಸದರಿ ಚಿಕಿತ್ಸೆಗೆ ಮಾಸಿಕ ರೂ.1,500/- ರಿಂದ ರೂ.2,000/- ಅಗತ್ಯತೆ ಇರುತ್ತದೆ. ಆದಾಗ್ಯೂ ಸದರಿರವರು ಸೃಷ್ಟನೆ ಮಾಡಿಕೊಂಡು ಚಿಕಿತ್ಸೆಗೆ ಮಾಸಿಕ ರೂ.10,000/- ಅಗತ್ಯತೆ ಇದೆ ಎಂದು ಹೇಳಿರುತ್ತಾರೆ. ಅರ್ಜಿದಾರರು ಅವರ ಆದಾಯವನ್ನು ತೋರಿಸದೆ, ಅವರ ಜೀವನೋಪಾಯಕ್ಕಾಗಿ ಮಾಸಿಕ ರೂ.15,000/-ಕೊಡಿಸಿಕೊಡಬೇಕೆಂದು ಕೋರಿದ್ದು, ಸದರಿ ಅಂಶವನ್ನು ಪರಿಗಣಿಸಲು ಬರುವುದಿಲ್ಲ. ಅರ್ಜಿದಾರರಿಗೆ ಸಾಕಷ್ಟು ಜಮೀನಿದ್ದು, ಸದರಿ ಜಮೀನಿನಿಂದ ಸಾಕಷ್ಟು ವರಮಾನ ಬರುತ್ತಿದ್ದು, ಆ ಕುರಿತು ನ್ಯಾಯಾಲಯಕ್ಕೆ ಮಾಹಿತಿಯನ್ನು ನೀಡಿರುವುದಿಲ್ಲ. ಎದುರುದಾರರಿಗೆ ಕೇವಲ 32 ಗುಂಟೆ ಜಮೀನಿದ್ದು, ಸದರಿ ಜಮೀನಿನಿಂದ ಲಕ್ಷಾಂತರ ರೂಗಳ ಆದಾಯವನ್ನು ನಿರೀಕ್ಷಿಸಿರುವುದು ಸರಿಯಲ್ಲ. ಎದುರುದಾರರಿಗೆ ಸದರಿ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ಆದಾಯದ ಮೂಲ ಇರುವುದಿಲ್ಲ. ಹಾಗಾಗಿ ಎದುರುದಾರರ ಆದಾಯದ ಮೂಲವನ್ನು ಕೇಳದೆ ಅರ್ಜಿದಾರರ ಹೇಳಿಕೆ ಮೇರೆಗೆ ಮಾಡಿರುವಂತಹ ಮದ್ಯಂತರ ಏಕಪಕ್ಷೀಯ ಜೀವನಾಂಶದ ಆದೇಶವನ್ನು ಮಾರ್ಪಾಡಿಸಿ, ಮದ್ಯಂತರ ಜೀವನಾಂಶದ ಆದೇಶವನ್ನು ಪುನರ್ ನಿರ್ದೇಶನ ಮಾಡಿ ಅರ್ಜಿದಾರರು ಸಲ್ಲಿಸಿರುವಂತಹ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

4. ಮೇಲ್ಕಂಡ ಸಂಗತಿಗಳನ್ನು ಪರಿಗಣಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಆವಗಾಹನೆಗೆ ಬರುತ್ತವೆ:-

1. ಅರ್ಜಿದಾರರು ಮದ್ಯಂತರ ಅರ್ಜಿ ಸಂಖ್ಯೆ1 ರಲ್ಲಿ ಕೋರಿರುವಂತೆ ಎದುರುದಾರರಿಗೆ ಮಾಸಿಕ ರೂ.15,000/- ಹಣವನ್ನು ಜೀವನಾಂಶವಾಗಿ ಪಾವತಿಸುವಂತೆ ನಿರ್ದೇಶನ ನೀಡಬೇಕೆಂದು ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರೇ?

2. ಹಾಗಿದ್ದಲ್ಲಿ ಯಾವ ಆದೇಶ?

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಕಂಡಂತೆ ಇದೆ:-

ಅಂಶ 1 : ಭಾಗಶಃ ಸಕಾರಾತ್ಮಕವಾಗಿ
ಅಂಶ 2 : ಅಂತಿಮ ಆದೇಶದಂತೆ:-

**ಕಾ ರ ಣ ಗ ಳು**

7. **ಅಂಶ 1:-** ಪ್ರಸ್ತುತ ಈ ಮುಖ್ಯ ಅರ್ಜಿಯನ್ನು ಎದುರುದಾರರ ವಿರುದ್ಧ ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 125(3)ರ ಅಡಿಯಲ್ಲಿ ಸಲ್ಲಿಸಿ, ಎದುರುದಾರರಿಂದ ಮಾಸಿಕ ರೂ.25,000/- ಜೀವನಾಂಶವನ್ನು ಕೊಡಿಸಕೊಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ. ಮುಖ್ಯ ಅರ್ಜಿಗೆ ಪೂರಕವಾಗಿ ಮದ್ಯಂತರ ಅರ್ಜಿ ಸಂಖ್ಯೆ 1ನ್ನು ಸಲ್ಲಿಸಿ, ಮುಖ್ಯ ಅರ್ಜಿಯ ಅಂತಿಮ ಆದೇಶದವರೆಗೂ ಅರ್ಜಿದಾರರಿಗೆ ಮಾಸಿಕ ರೂ.15,000/- ಜೀವನಾಂಶವನ್ನು ಕೊಡಿಸಕೊಡಬೇಕೆಂದು ಕೋರಿರುತ್ತಾರೆ.

8. ಅರ್ಜಿದಾರರು ಸಲ್ಲಿಸಿರುವ ಮುಖ್ಯ ಅರ್ಜಿ, ಎದುರುದಾರರು ಸಲ್ಲಿಸಿರುವ ತಕರಾರು, ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:1, ಸದರಿ ಮಧ್ಯಂತರ ಅರ್ಜಿಗೆ ಎದುರುದಾರರು ಸಲ್ಲಿಸಿರುವ ತಕರಾರು, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಹಾಗೂ ಉಭಯ ಪಕ್ಷಗಾರರು ಸಲ್ಲಿಸಿರುವ ಪ್ರಮಾಣ ಪತ್ರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

9. ಪ್ರಸ್ತುತ ಮದ್ಯಂತರ ಅರ್ಜಿಯ ಕುರಿತು ಅರ್ಜಿದಾರರ ಪರ ವಕೀಲರು ವಾದ ಮಂಡನೆಯ ಕಾಲಕ್ಕೆ ಅರ್ಜಿದಾರರ ಮತ್ತು ಎದುರುದಾರರ ವಿವಾಹವು ದಿನಾಂಕ 18.04.2014ರಂದು ನಂಜನಗೂಡಿನ ಯಾತ್ರಿ ಭವನದಲ್ಲಿ ನೆರವೇರಿದ್ದು, ಎದುರುದಾರರು ವಿವಾಹದ ಎರಡು ವರ್ಷದವರೆಗೆ ಅರ್ಜಿದಾರರನ್ನು ಚೆನ್ನಾಗಿ ನೋಡಿಕೊಂಡಿದ್ದು, ಆನಂತರ ಆಕೆಗೆ ಅನಾರೋಗ್ಯವಾದ ಕಾರಣ ಅರ್ಜಿದಾರರನ್ನು ನಿರ್ಲಕ್ಷಿಸಿ ಆಕೆಗೆ ಅಗತ್ಯ ಚಿಕಿತ್ಸೆಯನ್ನು ಕೊಡಿಸದೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆಯನ್ನು ನೀಡಿರುತ್ತಾರೆ ಎಂದು ಹೇಳಿರುತ್ತಾರೆ. ಅರ್ಜಿದಾರರು ಪ್ರಸ್ತುತ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದು, ಹಾಗಾಗಿ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದು, ಸದರಿ ಚಿಕಿತ್ಸೆಗೆ ಮಾಸಿಕ ರೂ.10,000/- ರಿಂದ 15,000/-ರೂಗಳ ಅಗತ್ಯತೆ ಇದ್ದು ಹಾಗೂ ಅರ್ಜಿದಾರರ ಜೀವನದ ವಸ್ತುಗಳ ಅಗತ್ಯತೆಗಾಗಿ ಹಣದ ಅಗತ್ಯತೆ ಇರುವುದರಿಂದ

ಎದುರುದಾರರಿಗೆ ಮಾಸಿಕ ರೂ.15,000/- ಜೀವನಾಂಶವನ್ನು ಪಾವತಿಸುವಂತೆ ನಿರ್ದೇಶಿಸಬೇಕೆಂದು ಕೋರಿರುತ್ತಾರೆ.

10. ಪ್ರಸ್ತುತ ಮಧ್ಯಂತರ ಅರ್ಜಿಯ ಕುರಿತು ಎದುರುದಾರರ ವಕೀಲರು ತಮ್ಮ ವಾದ ಮಂಡನೆಯ ಕಾಲಕ್ಕೆ ಅರ್ಜಿದಾರರು ಮತ್ತು ಎದುರುದಾರರು ಪತಿ ಪತ್ನಿಯರು ಎಂಬುದನ್ನು ಒಪ್ಪಿರುತ್ತಾರೆ. ಅಂತೆಯೇ ಅರ್ಜಿದಾರರು ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದಾರೆ ಎಂಬುದನ್ನು ಕೂಡ ಒಪ್ಪಿರುತ್ತಾರೆ. ಆದಾಗ್ಯೂ ಅರ್ಜಿದಾರರು ನಂಜನಗೂಡಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದು, ಹಾಗಾಗಿ ಅರ್ಜಿಯಲ್ಲಿ ಉಲ್ಲೇಖಿಸಿರುವಂತೆ ಮಾಸಿಕ ರೂ.10,000/- ಹಣದ ಅಗತ್ಯತೆ ಇರುವುದಿಲ್ಲ ಎಂದು, ಬದಲಾಗಿ ಮಾಸಿಕ 1,000/- ರಿಂದ 2,000/-ರೂಗಳ ಹಣದ ಅಗತ್ಯತೆ ಇದೆ ಎಂದು ಹೇಳಿರುತ್ತಾರೆ. ಅರ್ಜಿದಾರರಿಗೆ ಆಕೆಯ ತಂದೆಯ ಕುಟುಂಬಕ್ಕೆ ಸೇರಿದ ಜಮೀನಿಂದ ಆದಾಯ ಇದ್ದು, ಎದುರುದಾರರಿಗೆ ಹೆಚ್ಚಿನ ಆದಾಯ ಇಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ ನ್ಯಾಯಾಲಯವು ಏಕಪಕ್ಷೀಯವಾಗಿ ಆದೇಶಿಸಿರುವ ರೂ.8,000/- ಜೀವನಾಂಶವನ್ನು ಪಾವತಿಸುವ ಕುರಿತಾದ ಆದೇಶವನ್ನು ಪುನರ್ ಪರಿಶೀಲಿಸಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

11. ಈ ಮೇಲ್ಕಂಡ ಉಭಯ ಪಕ್ಷಗಾರರ ಹೇಳಿಕೆಗಳನ್ನು, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು ಹಾಗೂ ಉಭಯ ಪಕ್ಷಗಾರರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಮೇರೆಗೆ ಸಲ್ಲಿಸಿರುವ ಪ್ರಮಾಣ ಪತ್ರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಅರ್ಜಿದಾರರು ಮತ್ತು ಎದುರುದಾರರ ವಿವಾಹದ ಕುರಿತಾಗಿ ಯಾವುದೇ ತಕರಾರು ಇರುವುದಿಲ್ಲ. ಅರ್ಜಿದಾರರು ಮತ್ತು ಎದುರುದಾರರ ವಿವಾಹವು ದಿನಾಂಕ 18.04.2014 ರಂದು ನೆರವೇರಿದ್ದು, ಅರ್ಜಿಯನ್ನು ಸಲ್ಲಿಸುವ ದಿನಾಂಕದಿಂದ 6 ತಿಂಗಳ ಹಿಂದಿನಿಂದ ಉಭಯ ಪಕ್ಷಗಾರರು ಪ್ರತ್ಯೇಕವಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ದಿನಾಂಕ 29.04.2022 ರಂದು ಅರ್ಜಿದಾರರು ಮತ್ತು ಆತನ ಸಂಬಂಧಿಕರ ವಿರುದ್ಧ ಮಾನಸಿಕವಾಗಿ ಹಿಂಸೆಯನ್ನು ನೀಡಿ ಮನೆಯಿಂದ ಹೊರಹಾಕಿರುವ ಕುರಿತು ದೂರನ್ನು ನೀಡಿದ್ದು, ಸದರಿ ದೂರಿನ ಆಧಾರದಲ್ಲಿ ನಂಜನಗೂಡು ಪಟ್ಟಣ ಪೋಲಿಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ 498 ಎ, 504 ಸಹವಾಚಕ 34 ರಡಿಯಲ್ಲಿ ಮತ್ತು ವರದಕ್ಷಿಣೆ ನಿಷೇಧ ಕಾಯಿದೆ 3 ಮತ್ತು 4 ರಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಮೇಲ್ಕಂಡ

ದಾಖಲಾತಿಯನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಎದುರುದಾರರು ಅರ್ಜಿದಾರರನ್ನು ಮನೆಯಿಂದ ಹೊರಹಾಕಿರುತ್ತಾರೆ ಎಂಬುದನ್ನು ಪರಿಗಣಿಸಲಾಗುತ್ತದೆ.

12. ಅರ್ಜಿದಾರರು ತಮ್ಮ ಅರ್ಜಿಗೆ ಪೂರಕವಾಗಿ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುವ ಕುರಿತಾಗಿ ದಿನಾಂಕ 10.10.2019 ರಿಂದ 12.10.2020 ರ ಅವಧಿವರೆಗೆ ಹಾಗೂ ನಂತರ ಅವಧಿಗೆ ಸಂಬಂಧಿಸಿದಂತೆ ರಶೀದಿಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ರಶೀದಿಗಳನ್ನು ಪರಿಶೀಲಿಸಲಾಗಿ ಅರ್ಜಿದಾರರು ಕಿಡ್ನಿ ವೈಫಲ್ಯದ ಸಮಸ್ಯೆಗಾಗಿ ಡಯಾಲಿಸೀಸ್ ಚಿಕಿತ್ಸೆಯನ್ನು ಪಡೆಯುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಅರ್ಜಿದಾರರು ಸಲ್ಲಿಸಿರುವ ರಶೀದಿಗಳನ್ನು ಪರಿಶೀಲಿಸಲಾಗಿ, ವಾರಕ್ಕೆ ಎರಡು ಬಾರಿ ಡಯಾಲಿಸೀಸ್ ಚಿಕಿತ್ಸೆಯನ್ನು ಪಡೆಯುತ್ತಿದ್ದು, ಒಂದು ಬಾರಿ ಚಿಕಿತ್ಸೆಗೆ ರೂ.1,150/-ಗಳನ್ನು ಪಾವತಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಮೇಲ್ಕಂಡ ಹಿನ್ನಲೆಯಲ್ಲಿ ಪರಿಶೀಲಿಸಿದಾಗ ಅರ್ಜಿದಾರರು ತಿಂಗಳಿಗೆ 8 ರಿಂದ 10 ಬಾರಿ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಡಯಾಲಿಸೀಸ್ ಚಿಕಿತ್ಸೆಯನ್ನು ಪಡೆಯುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹಾಗಾಗಿ ಅರ್ಜಿದಾರರು ಡಯಾಲಿಸೀಸ್ ಚಿಕಿತ್ಸೆಗಾಗಿ ಮಾಸಿಕ ರೂ.10,000/- ಹಣವನ್ನು ಪಾವತಿಸಿರುವುದು ಅರ್ಜಿದಾರರು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಕಂಡು ಬರುತ್ತದೆ. ಹಾಗಾಗಿ ಎದುರುದಾರರ ಹೇಳಿಕೆಯಂತೆ ಅರ್ಜಿದಾರರು ನಂಜನಗೂಡಿನ ಸರ್ಕಾರಿ ಆಸ್ಪತ್ರೆಯಲ್ಲಿ ಕಿಡ್ನಿ ವೈಫಲ್ಯದ ಸಮಸ್ಯೆಗಾಗಿ ಡಯಾಲಿಸೀಸ್ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ ಎಂಬುದನ್ನು ಪರಿಗಣಿಸಲು ಬರುವುದಿಲ್ಲ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಅರ್ಜಿದಾರರಿಗೆ ಕಿಡ್ನಿ ವೈಫಲ್ಯದ ಸಮಸ್ಯೆಗಾಗಿ ಡಯಾಲಿಸೀಸ್ ಚಿಕಿತ್ಸೆಗಾಗಿ ಮಾಸಿಕ ರೂ.10,000/- ವೆಚ್ಚ ಉಂಟಾಗುತ್ತದೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಅರ್ಜಿದಾರರು ಸಲ್ಲಿಸಿರುವ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ತನಗೆ ಮಾಸಿಕ ರೂ.25,000/- ಹಣದ ಅಗತ್ಯತೆ ಇದ್ದು, ವಿವಾಹದ ಎರಡು ವರ್ಷಗಳ ನಂತರದಿಂದ ತನ್ನ ಕಿಡ್ನಿಗಳು ವೈಫಲ್ಯಗೊಂಡಿದ್ದು, ತಾನು ಡಯಾಲಿಸೀಸ್ ಚಿಕಿತ್ಸೆಯನ್ನು ಪಡೆಯುತ್ತಿದ್ದು, ಸದರಿ ಚಿಕಿತ್ಸೆಗಾಗಿ ಹಣದ ಅಗತ್ಯತೆ ಇರುವುದಾಗಿ ಹೇಳಿರುತ್ತಾರೆ. ಅಂತೆಯೇ ಸದರಿ ಚಿಕಿತ್ಸೆಯ ಅಗತ್ಯತೆಗಾಗಿ ತಾನು ಸಾಲವನ್ನು ಪಡೆದಿದ್ದು, ಸದರಿ ಸಾಲವನ್ನು ಮಾಸಿಕ ರೂ.3,000/- ಕಂತಿನಂತೆ ಪಾವತಿಸುವುದಾಗಿ ಉಲ್ಲೇಖಿಸಿರುವುದು ಕಂಡು ಬರುತ್ತದೆ. ಎದುರುದಾರರು ಹೋಟೆಲ್ ಮತ್ತು ಸಿಮೆಂಟ್ ಇಟ್ಟಿಗೆಯ

ವ್ಯಾಪಾರವನ್ನು ಮಾಡುತ್ತಿದ್ದು ಮತ್ತು ವ್ಯವಸಾಯವನ್ನು ಮಾಡುತ್ತಿದ್ದು, ಮಾಸಿಕ ರೂ.1,00,000/- ಆದಾಯವನ್ನು ಹೊಂದಿದ್ದು, ಎದುರುದಾರರು ಒಂದು ಕಾರನ್ನು ಮತ್ತು ಎರಡು ದ್ವಿಚಕ್ರ ವಾಹವನ್ನು ಹೊಂದಿರುವುದಾಗಿ ಪ್ರಮಾಣಿಕರಿಸಿರುತ್ತಾರೆ. ಹಾಗಾಗಿ ಈ ಎಲ್ಲಾ ಅಂಶಗಳನ್ನು ಪರಿಗಣಿಸುವಂತೆ ಕೋರಿರುತ್ತಾರೆ.

14. ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಎದುರುದಾರರು ಸಲ್ಲಿಸಿರುವ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ, ತನ್ನ ಪ್ರಮಾಣ ಪತ್ರದಲ್ಲಿ ತನಗೆ 55 ವರ್ಷದ ವಯಸ್ಸಿನ ತಾಯಿ ಇದ್ದು, 80 ವರ್ಷಗಳ ವಯಸ್ಸಿನ ಅಜ್ಜಿ ಇದ್ದು, ತನ್ನ ಅಜ್ಜಿ ರಕ್ತದೊತ್ತಡ ಖಾಯಿಲೆಯಿಂದ ಬಳಲುತ್ತಿದ್ದು, ಹಾಗಾಗಿ ಆಕೆಯ ಜೀವನ ನಿರ್ವಹಣೆಗೆ ಮಾಸಿಕ ರೂ.10,000/- ಅಗತ್ಯತೆ ಇದೆ ಎಂದು ಹೇಳಿರುತ್ತಾರೆ. ಎದುರುದಾರರು ತನ್ನ ಪ್ರಮಾಣ ಪತ್ರದಲ್ಲಿ ತಾನು ಸ್ವಯಂ ಉದ್ಯೋಗ್ಯವನ್ನು ಮಾಡುತ್ತಿದ್ದು, ಮಾಸಿಕ ರೂ.10,000/- ಆದಾಯವಿದ್ದು, ತನಗೆ ರೂ.1,00,000/- ವಾರ್ಷಿಕ ಆದಾಯವಿದ್ದು, ತಾನು ಕಾರನ್ನು ಮತ್ತು ಟಿಪ್ಪರ್ ನ್ನು ಖರೀದಿಸಲು ರೂ.32,00,000/-ಸಾಲವನ್ನು ಮಾಡಿರುವುದಾಗಿ ಹೇಳಿರುತ್ತಾರೆ. ಅಂತೆಯೇ ಅರ್ಜಿದಾರರ ತಂದೆಯ ಕುಟುಂಬಕ್ಕೆ ಜಮೀನಿದ್ದು ಸದರಿ ಜಮೀನಿನಿಂದ ಅರ್ಜಿದಾರರಿಗೆ ವಾರ್ಷಿಕ ರೂ.5,00,000/- ಇದೆ ಎಂದು ಹೇಳಿರುತ್ತಾರೆ.

15. ಈ ಮೇಲ್ಕಂಡ ಉಭಯ ಪಕ್ಷಗಾರರು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ, ಎದುರುದಾರರು ಸ್ವಯಂ ಉದ್ಯೋಗ್ಯವನ್ನು ಮಾಡುತ್ತಿದ್ದು, ರೂ.32,00,000/- ಲಕ್ಷ ಸಾಲವನ್ನು ಮಾಡಿ ಟಿಪ್ಪರ್ ಮತ್ತು ಕಾರನ್ನು ಖರೀದಿಸಿರುವುದನ್ನು ಪರಿಶೀಲಿಸಲಾಗಿ ಎದುರುದಾರರಿಗೆ ರೂ.32,00,000/- ಲಕ್ಷವನ್ನು ಮರುಪಾವತಿ ಮಾಡುವಂತಹ ಆರ್ಥಿಕ ಸಾರ್ಮರ್ಥ್ಯ ಇರುವುದು ಹಾಗೂ ಅಷ್ಟು ಪ್ರಮಾಣದ ವ್ಯವಹಾರವನ್ನು ಮಾಡುವ ಸಾರ್ಮರ್ಥ್ಯ ಇರುವುದು ಕಂಡು ಬರುತ್ತದೆ. ಈ ಅಂಶಗಳನ್ನು ಗಮನಿಸಿದಾಗ ಎದುರುದಾರರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಉನ್ನತ ಮಟ್ಟದ ಜೀವನವನ್ನು ಮಾಡುತ್ತಿರುವುದು ಕಂಡು ಬರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಎದುರುದಾರರು ತನ್ನ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿರುವಂತೆ ರೂ.32,00,000/- ಸಾಲವನ್ನು ಮಾಡಿ ಟಿಪ್ಪರ್ ನ್ನು ಖರೀದಿಸಿರುವಾಗ ಅರ್ಜಿದಾರರು ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಸಿಮೆಂಟ್ ಇಟ್ಟಿಗೆಯ ವ್ಯಾಪಾರವನ್ನು ಮಾಡುತ್ತಿರುವುದು ಮತ್ತು ಇತರೆ ವ್ಯವಹಾರವನ್ನು ಮಾಡುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹಾಗಾಗಿ ಅರ್ಜಿದಾರರು ಕೂಡ ಎದುರುದಾರರ ಸ್ಥರದಲ್ಲಿಯೇ ಜೀವನವನ್ನು ನಿರ್ವಹಿಸುವಂತಹ ಹಕ್ಕನ್ನು ಹೊಂದಿರುವುದು ಕಂಡು ಬರುತ್ತದೆ. ಎದುರುದಾರರು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಆತನ ಅಜ್ಜಿಯ ಚಿಕಿತ್ಸೆಗಾಗಿ ಮಾಸಿಕ

ರೂ.10,000/- ಹಣವನ್ನು ಪಾವತಿಸಿರುವುದನ್ನು ಗಮನಿಸಿದಾಗ, ಎದುರುದಾರರಿಗೆ ಮಾಸಿಕ ರೂ.10,000/- ಆದಾಯ ಇದೆ ಎಂದು ಪರಿಗಣಿಸಲು ಬರುವುದಿಲ್ಲ ಎಂದು, ಬದಲಾಗಿ ಅದಕ್ಕಿಂತ ಹೆಚ್ಚಿನ ಪ್ರಮಾಣದ ಆದಾಯ ಇದೆ ಎಂದು ಕಂಡು ಬರುತ್ತದೆ ಎಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಎದುರುದಾರರು ಆತನ ಅಜ್ಜಿಯ ಚಿಕಿತ್ಸೆಗಾಗಿ ಮಾಸಿಕ ರೂ.10,000/-ವನ್ನು ವೆಚ್ಚ ಮಾಡುವಂತಹ ಸಾಮರ್ಥ್ಯ ಹೊಂದಿರುವಾಗ ಆತನ ಪತ್ನಿಯ ಎರಡು ಕಿಡ್ನಿಗಳು ವೈಫಲ್ಯಗೊಂಡಿರುವಾಗ ಆತನ ಪತ್ನಿಯಾದ ಅರ್ಜಿದಾರರ ಚಿಕಿತ್ಸೆಯ ವೆಚ್ಚಗಳನ್ನು ಭರಿಸಲು ಹಾಗೂ ಆಕೆಯ ಜೀವನೋಪಾಯದ ಎಲ್ಲಾ ಅಗತ್ಯತೆಗಳನ್ನು ಭರಿಸಲು ಆರ್ಥಿಕ ಸಾಮರ್ಥ್ಯ ಹೊಂದಿರುತ್ತಾರೆ ಎಂದು ಸ್ಪಷ್ಟವಾಗಿ ಕಂಡು ಬರುತ್ತದೆ.

16. ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ ಎದುರುದಾರರು ಅರ್ಜಿದಾರರಿಗೆ ಆಕೆಯ ಚಿಕಿತ್ಸೆಗಾಗಿ ಅಗತ್ಯವಾದಂತಹ ಹಾಗೂ ಆಕೆಯ ಜೀವನ ನಿರ್ವಹಣೆಗೆ ಅಗತ್ಯವಾದಂತಹ ವಸ್ತುಗಳಿಗಾಗಿ ಜೀವನಾಂಶವನ್ನು ನೀಡುವಂತಹ ಆರ್ಥಿಕ ಸಾಮರ್ಥ್ಯವನ್ನು ಹೊಂದಿರುತ್ತಾರೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಎದುರುದಾರರು ಜೀವನವನ್ನು ನಿರ್ವಹಿಸುವಂತಹ ಸ್ಥರದಲ್ಲಿಯೆ ಅರ್ಜಿದಾರರಿಗೆ ಜೀವನವನ್ನು ನಡೆಸಲು ಮತ್ತು ಆಕೆಯ ವೈದ್ಯಕೀಯ ವೆಚ್ಚಕ್ಕಾಗಿ ಮಾಸಿಕ ಕನಿಷ್ಟ ರೂ.12,000/-ಗಳ ಅಗತ್ಯತೆ ಇದೆ ಎಂದು ನ್ಯಾಯಾಲಯಕ್ಕೆ ಕಂಡು ಬರುತ್ತದೆ. ಹಾಗಾಗಿ ರೂ.12,000/- ಜೀವನಾಂಶವನ್ನು ಪಾವತಿಸುವಂತಹ ಆರ್ಥಿಕ ಸಾಮರ್ಥ್ಯ ಕೂಡ ಎದುರುದಾರರಿಗೆ ಇದೆ ಎಂಬುದು ಮೇಲ್ಕಂಡ ಅಂಶಗಳಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ಹಾಗಾಗಿ ಅರ್ಜಿದಾರರು ಅರ್ಜಿಯಲ್ಲಿ ಕೋರಿರುವಂತೆ ಎದುರುದಾರರಿಂದ ಮಾಸಿಕ ರೂ.12,000/- ಜೀವನಾಂಶವನ್ನು ಪಡೆಯಲು ಅರ್ಹರಿರುತ್ತಾರೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಅರ್ಜಿದಾರರು ಎರಡು ಕಿಡ್ನಿಗಳ ವೈಫಲ್ಯದಿಂದ ಬಳಲುತ್ತಿರುವ ಕಾರಣದಿಂದ ಆಕೆಯ ಚಿಕಿತ್ಸೆಗೆ ಅಗತ್ಯವಾದಂತಹ ಎಲ್ಲಾ ಅಗತ್ಯವಾದಂತಹ ಪೂರೈಕೆಗಳನ್ನು ಮಾಡುವಂತಹ ಹೊಣೆಗಾರಿಕೆ ಎದುರುದಾರರದ್ದೇ ಆಗಿದ್ದು, ಹಾಗಾಗಿ ಆಕೆಯ ಚಿಕಿತ್ಸೆಗೆ ಅಗತ್ಯವಾಗಿ ಎಲ್ಲಾ ಅಗತ್ಯತೆಗಳನ್ನು ಪೂರೈಸುವಂತಹ ಜವಾಬ್ದಾರಿಯುತ ಹೊಣೆಗಾರಿಕೆ ನಿರ್ವಹಿಸಲು ಎದುರುದಾರರು ಅರ್ಜಿದಾರರಿಗೆ ಮಾಸಿಕ ರೂ.12,000/- ಜೀವನಾಂಶವನ್ನು ನೀಡವಂತೆ ಈ ಮೂಲಕ ನಿರ್ದೇಶಿಸಲಾಗಿದೆ. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಅಂಶ-1 ನ್ನು ಸಕರಾತ್ಮಕ ಎಂದು ನಿರ್ಣಯಿಸಲಾಗಿದೆ.

17. **ಅಂಶ 2:-** ಈಗಾಗಲೇ ಅಂಶ-1 ನ್ನು ಭಾಗಶಃ ಸಕಾರಾತ್ಮಕ ಎಂದು ನಿರ್ಣಯಿಸಿದ್ದು ಈ ಕೆಳಕಂಡಂತೆ ಆದೇಶಿಸಲಾಗಿದೆಃ-

**ಆದೇಶ**

ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ1 ನ್ನು ಭಾಗಶಃ ಪುರಸ್ಕರಿಸಲಾಗಿದೆ.

ಎದುರುದಾರನು ಅರ್ಜಿದಾರರಿಗೆ ಮಾಸಿಕ ರೂ.12,000/- ಮೊತ್ತವನ್ನು ಮಧ್ಯಂತರ ಜೀವನಾಂಶವಾಗಿ ಮಧ್ಯಂತರ ಅರ್ಜಿ ಸಂಖ್ಯೆಃ1 ನ್ನು ದಾಖಲಿಸಿದ ದಿನದಿಂದ ಈ ಪ್ರಕರಣವು ಮುಕ್ತಾಯವಾಗುವವರೆಗೂ ಪಾವತಿಸತಕ್ಕದ್ದು.

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

ಪ್ರಕರಣವನ್ನು ದಿಃ21.10.2022 ಕ್ಕೆ ಮಧ್ಯಂತರ ಜೀವನಾಂಶವನ್ನು ಪಾವತಿಸುವ ಕುರಿತು ಮುಂದೂಡಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 11 ನೇ ಅಕ್ಟೋಬರ್, 2022 ರಂದು ನಾನು ಉದ್ಘೋಷಿಸಿದ್ದೇನೆ.)

(ಎನ್. ಎಸ್. ರಘುರಾಮ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನಂಜನಗೂಡು.